ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಶಾಸಕರು ಎತ್ತಿದಂತಹ ಪ್ರಶ್ನೆಯನ್ನು ಸನ್ಮಾನ್ಯ ಬಂದರು, ವಿಮಾನಾಗಾರಿಕೆ, ವಸತಿ ಹಾಗೂ ನಗರಭಿವೃದ್ಧಿ ಸಚಿವರ ಗಮನಕ್ಕೆ ತರುತ್ತೇನೆ.

೫೫ ಕೃಷ್ಣರಾಜ ಪೇಟೆಯಲ್ಲಿರುವ ಪದವಿ ಕಾಲೇಜಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವ ಬಗ್ಗೆ.

ಶ್ರೀ ಎಂ. ಪುಟ್ಟಸ್ವಾಮಿ ಗೌಡ (ಕೃಷ್ಣರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಕೃಷ್ಣರಾಜ ಪೇಟೆಯಲ್ಲಿರುವ ಪದವಿ ಕಾಲೇಜು ಪ್ರಾರಂಭವಾಗಿ ಮೂರು ವರ್ಷಗಳಾಗಿವೆ. ಅಲ್ಲಿ ೨೫೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು ಅಲ್ಲಿ ಯಾವುದೇ ರೀತಿಯ ಸೌಲಭ್ಯಗಳು ಅಂದರೆ, ಪೀಠೋಪಕರಣಗಳಾಗಲೀ, ಕೊಠಡಿಗಳಾಗಲೀ, ಕೊನೆಗೆ ನಿವೇಶನವಾಗಲೀ ಇಲ್ಲದೆ ಪದವಿ ಪೂರ್ವ ಕಾಲೇಜಿನಲ್ಲಿಯೇ ನಡೆಯುತ್ತಿದ್ದು ತುಂಬಾ ತೊಂದರೆಯಾಗಿದೆ. ಆದುದರಿಂದ ಈ ಅನಾನುಕೂಲತೆಯನ್ನು ಆದಷ್ಟು ಬೇಗ ನಿವಾರಣೆ ಮಾಡಿಕೊಡಬೇಕೆಂದು ವಿದ್ಯಾ ಮಂತ್ರಿಗಳಿಗೆ ಸೂಚಿಸಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ.

೧೯೮೬-೮೭ನೇ ಸಾಲಿನಲ್ಲಿ ಕೃಷ್ಣರಾಜ ಪೇಟೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲಾಗಿದೆ. ಕಾಲೇಜು ಪ್ರಾರಂಭವಾದಾಗಿನಿಂದ, ಈ ಕಾಲೇಜು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುತ್ತಿದೆ.

ಪೀಠೋಪಕರಣಗಳ ಬಾಬ್ತು ೪೦ ಮರದ ಡೆಸ್ಕುಗಳನ್ನು ಹಾಗೂ ಕಛೇರಿಗೆ ಅವಶ್ಯಕವಾದ ಪೀಠೋಪಕರಣಗಳನ್ನು ಒದಗಿಸಲಾಗಿದೆ. ಮುಂದುವರಿದಂತೆ, ಗ್ರಂಥಾಲಯಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಕಾಲೇಜು ಕಟ್ಟಡ ನಿರ್ಮಾಣಕ್ಕೊಸ್ಕರವಾಗಿ, ಕೃಷ್ಣರಾಜಪೇಟೆಯ ಹೊಸ ಹೊಳಲು ಗ್ರಾಮದ ಸರ್ವೆ: ೧೪೪ರಲ್ಲಿ ೯.೦೦ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ. ತದನಂತರ, ಕಟ್ಟಡ ನಿರ್ಮಾಣ ಕಾರ್ಯದ ಬಗ್ಗೆ ಹಣದ ಲಭ್ಯತೆಗನುಗುಣವಾಗಿ ಕ್ರಮ ತೆಗೆದು ಕೊಳ್ಳಲಾಗುವುದು.

ಅಧ್ಯಕ್ಷರು.—ಈಗ ಆಯುಷ್ಯದ ಮೇಲೆ ಮುಂದುವರಿದ ಚರ್ಚೆ.

ಶ್ರೀ ಎಲ್. ಆರ್. ಶಿವರಾಮೇಗೌಡ —ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅದು ಬಹಳ ಪ್ರಮುಖವಾದ ವಿಚಾರ. ನಾಗಮಂಗಲ ತಾಲ್ಲೂಕಿನ ಹಳ್ಳಿಗಳಲ್ಲಿ ಕುಡಿಯುವ ನೀರು ಇಲ್ಲದೆ ಜನರು ಕಷ್ಟಪಡುತ್ತಿದ್ದಾರೆ. .....

ಅಧ್ಯಕ್ಷರು.—ನೋಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ —ನೀವು ನೋಡುವವರೆಗೆ, ಅವರು ನೀರು ಕುಡಿಯುವುದೇ ಬೇಡವೇ ಸ್ವಾಮಿ?

ಅಧ್ಯಕ್ಷರು.—ಇದನ್ನು ಕನ್ಸಿಡರ್ ಮಾಡುತ್ತೇನೆ.

೧೨-೩೦ ಪಿ.ಎಂ.

ಶ್ರೀ ಪಾಟೀಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ ನಾನು ವಿದ್ಯುಚ್ಛಕ್ತಿ ಅಭಾವದ ಬಗ್ಗೆ ಕಳುಹಿಸಿರುವ ಗಮನ ಸೆಳೆಯುವ ಸೂಚನೆಯು ತಮ್ಮ ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಹೌದು ಬಂದಿದೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೆಗೆದುಕೊಂಡ ತೀರ್ಮಾನದ ಪ್ರಕಾರ ಈ ದಿವಸಕ್ಕೆ ಬಜೆಟ್ ಮೇಲಿನ ಚರ್ಚೆಯು ಮುಕ್ತಾಯವಾಗಬೇಕಿತ್ತು. ನಾಳೆ ಮಾನ್ಯ ಹಣಕಾಸಿನ ಸಚಿವರು ಚರ್ಚೆಗೆ ಉತ್ತರವನ್ನು ಕೊಡಬೇಕು. ಆದುದರಿಂದ ಇವೊತ್ತು ಬಹಳ ಹೊತ್ತಾದರೂ ಕಾಳಿತು ಮಾತನಾಡತಕ್ಕಂಥಾದ್ದು ಇದೆ. ಎಲ್ಲಾ ಮಾನ್ಯ ಸದಸ್ಯರಿಗೂ ಸೂಕ್ತ ಅವಕಾಶವನ್ನು ಕೊಡಬೇಕಾಗಿರುವುದರಿಂದ ಸಮಯಾವಕಾಶ ಕೊಡುವುದರ ಮೇಲೆ ನಿಯಂತ್ರಣವನ್ನು ಹಾಕಬೇಕಾದಂಥ ಪರಿಸ್ಥಿತಿಯು ಬಂದಿದೆ. ಈ ಸಮಯದ ಮಿತಿಯನ್ನು ಮಾನ್ಯ ಸದಸ್ಯರುಗಳು

ಅರ್ಥ ಮಾಡಿಕೊಂಡು ತಮ್ಮ ಭಾಷಣದ ಸಮಯದ ಮಿತಿಯನ್ನು ಜ್ಞಾಪಿಸಿಕೊಂಡು ತಮ್ಮ ಮೇಲೆ ತಮ್ಮ ಸಮಯದ ನಿಯಂತ್ರಣವನ್ನು ಮಾಡಿಕೊಂಡು ನನಗೆ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವಾಗ ಕಾಲ ಮಿತಿಯ ಬಗ್ಗೆ ಗಮನ ಇಟ್ಟು ಮಾತನಾಡುತ್ತೇವೆ ಆದರೆ ಸಭೆಯ ಹೊಸ ಸದಸ್ಯರಿಗೆ ಸ್ವಲ್ಪ ವಿನಾಯಿತಿ ಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಮೈಡನ್ ಸ್ಪೀಚ್‌ಗೆ ಸ್ವಲ್ಪ ವಿನಾಯಿತಿ ಇರುತ್ತದೆ.

ಶ್ರೀ ಕೆ. ಎಂ. ತಿಪ್ಪಸ್ವಾಮಿ.—ಯುವ ಸದಸ್ಯರಿಗೆ ಸ್ವಲ್ಪ ಕಾಲಾವಕಾಶ ಹೆಚ್ಚಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦-೯೧ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಅಧ್ಯಕ್ಷರು.—ಶ್ರೀ ಬಿ. ಎಸ್. ಯಡಿಯೂರಪ್ಪ ತಮ್ಮ ಭಾಷಣವನ್ನು ಪ್ರಾರಂಭಿಸಿ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣ ಕಾಸಿನ ಸಚಿವರು ೧೯೯೦-೯೧ ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿರತಕ್ಕಂಥ ಸಂದರ್ಭದಲ್ಲಿ ಆದರ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದಂಥ ಅನೇಕ ಜನ ಮಾನ್ಯ ಸದಸ್ಯರುಗಳು, ಹಿರಿಯ ಸದಸ್ಯ ರುಗಳು ಈ ಒಂದು ಆಯವ್ಯಯದಲ್ಲಿರುವಂಥ ಲೋಪದೋಷಗಳನ್ನು ಎತ್ತಿ ಹಿಡಿಯುವಂಥ ಪ್ರಯತ್ನವನ್ನು ಮಾಡಿದ್ದಾರೆ. ಅಂತೆಯೇ ಆದರಲ್ಲಿರುವಂಥ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ಪ್ರಶಂಸಿಸಿ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನಾದರೂ ಈ ರಾಜ್ಯದಲ್ಲಿ ಜನರು ಬದಲಾವಣೆಯನ್ನು ಬಯಸಿ ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಮೇಲೆ ಜನಪರ ಕಾರ್ಯಕ್ರಮ ಗಳನ್ನು ನೂತನ ಸರಕಾರ ರೂಪಿಸುತ್ತದೆ ಎಂದು ಭಾವಿಸಿದ್ದೆ. ಆದರೆ ಹಾಗೆ ಆಗಿಲ್ಲ. ಹಳ್ಳಿಗಳಲ್ಲಿರುವ ಬಡ ಕೂಲಿಗಾರರನ್ನು, ಕೃಷಿ ಕಾರ್ಮಿಕರನ್ನು ಹರಿಜನ-ಗಿರಿಜನರನ್ನು ಮೇಲೆ ತರುವಂಥ ಯಾವು ದಾದರೂ ಹೊಸ ಕಾರ್ಯಕ್ರಮಗಳನ್ನು ಈ ಬಜೆಟ್‌ನಲ್ಲಿ ಕಾಣಬಹುದು ಎಂದು ನಿರೀಕ್ಷೆ ಮಾಡಿದ್ದೆ. ಆದರೆ ಈ ರಾಜ್ಯದ ರೈತ ಕಾರ್ಮಿಕರಿಗೆ, ಹರಿಜನ-ಗಿರಿಜನರಿಗೆ, ಕೂಲಿಗಾರರಿಗೆ ಮಂಹಿಳೆಯರಿಗೆ. ನಿರುದ್ಯೋಗಿ ಯುವಕರಿಗೆ ಅವರ ನೆಮ್ಮದಿಯ ಜೀವನಕ್ಕೆ ದಾರಿ ಮಾಡಿಕೊಡುವಂಥ ಯಾವುದೇ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಇಲ್ಲವಲ್ಲ ಎಂದು ತಿಳಿಸುವುದಕ್ಕೆ ನನಗೆ ತುಂಬಾ ನೋವು ಆಗುತ್ತಾ ಇದೆ.

ಬಜೆಟ್ ಭಾಷಣದ ಒನೇ ಪುಟದಲ್ಲಿ ಹೇಳಿರುವಂತೆ,

> "ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ಹೆಚ್ಚು ಜನರು ವಲಸೆ ಹೋಗುತ್ತಿರುವ ಕಾರಣ ನಗರ ಗ್ರಾಮೀಣ ಕ್ಷೇತ್ರದಲ್ಲಿ ತೀವ್ರ ಬದಲಾವಣೆ ಉಂಟಾಗುತ್ತಿದೆ. ಇದಕ್ಕೆ ಬೆಂಗಳೂರು ನಗರವೇ ಒಂದು ಉತ್ತಮ ನಿದರ್ಶನ. ಗ್ರಾಮೀಣ ಪ್ರದೇಶಗಳಿಗೆ ವಿಶೇಷ ಗಮನ ನೀಡು ವುದರ ಜೊತೆಗೆ ಪಟ್ಟಣ ಮತ್ತು ನಗರಗಳ ಪರಿಸರ ಹದಗೆಡದಂತೆ ನೋಡಿಕೊಳ್ಳುವುದು ಅತ್ಯಗತ್ಯ"

ಎಂದು ಹೇಳಿದ್ದಾರೆ.

ಅಂದರೆ ಸರಕಾರದ ದೃಷ್ಟಿಯಲ್ಲಿ ಗ್ರಾಮೀಣ ಜನತೆಯು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾ ಇದಾರೆ, ಅವರು ಅಲ್ಲಿ ನೆಮ್ಮದಿಯಿಂದ ಇಲ್ಲ ಎಂದು ಸ್ಪಷ್ಟಪಡಿಸಿದ ಮೇಲೆ ಈ ಬಜೆಟ್‌ನಲ್ಲಿ ಗ್ರಾಮೀಣ ಜನತೆಯ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಇಡಬೇಕಾಗಿತ್ತು. ರಾಜ್ಯದ ಮುಂಗಡ ಪತ್ರ ಅಂದರೆ, ಅದರಲ್ಲಿ ಮೂರು ವಿಷಯಗಳು ಪ್ರಾಮುಖ್ಯವಾಗಿ ಇರಬೇಕು ಮುಂಗಡ ಪತ್ರವು ಯಾರನ್ನು ಉದ್ದೇಶಿಸಿ ಇರಬೇಕು ಎನ್ನುವುದು ಮುಖ್ಯ. ಇದರಲ್ಲಿ ಹೆಚ್ಚಿನ ಅವಕಾಶವನ್ನು ಸವಲತ್ತು ಗಳನ್ನು, ಶೇಕಡಾ ೮೦ರಷ್ಟು ಕೃಷಿ ಕ್ಷೇತ್ರದಲ್ಲಿರುವ ಆದರಲ್ಲಿ ಶ್ರಮಿಸುತ್ತಿರುವವರ ಏಳಿಗೆಗೋಸ್ಕರವಾಗಿ ಏನು ಕಾರ್ಯಕ್ರಮಗಳು ಇವೆ ಎಂದು ನೋಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಹಿನ್ನೆಲೆಯಲ್ಲಿ ಮುಂಗಡಪತ್ರದ ದಿಕ್ಕು ಏನಿರಬೇಕು ಎಂದು ಸ್ಪಷ್ಟನೆ ಮಾಡುವಂತಹ ಕೆಲಸವನ್ನು ಅವರು ಮಾಡಬೇಕಾಗಿತ್ತು. ನಾನು ಅಂದುಕೊಂಡಂತೆ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸದಿದ್ದರೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಕೃಷಿ ಕ್ಷೇತ್ರವನ್ನು